

### ಶಿಕ್ಷಕ ವೃತ್ತಿಯ ಸಾಧ್ಯತೆಗಳು

ವಿಜ್ಞಾನ ಮತ್ತು ಕಲಾ ವಿಭಾಗದ ವಿದ್ಯಾರ್ಥಿಗಳಿಗೆ ಪದವಿಯ ನಂತರ ಇರುವ ಇನ್ನೊಂದು ಆಯ್ಕೆ ಎಂದರೆ ಶಿಕ್ಷಕ ತರಬೇತಿ ಕಾಲೇಜುಗಳಲ್ಲಿ ಬಿ.ಎಡ್. ಪದವಿ ಅಧ್ಯಯನ ಮಾಡಿ ಶಿಕ್ಷಕ ವೃತ್ತಿಗೆ ಸೇರಿಕೊಳ್ಳುವುದು. ಶಿಕ್ಷಕ ವೃತ್ತಿಗೆ ಪೂರಕವಾದ ಮನೋಭಾವವನ್ನು ಹೊಂದಿರುವುದು ಇದಕ್ಕೆ ಅತ್ಯವಶ್ಯ. ಇಲ್ಲಿಯೂ ಸಹ ಬಿ.ಎಡ್. ಪದವಿಯ ನಂತರ ಎಂ.ಎಡ್. ಸ್ನಾತಕೋತ್ತರ ಪದವಿ ಪಡೆದು ನಂತರ ಸಂಶೋಧನೆ ಕೈಗೊಳ್ಳಬಹುದು.

ಇಂದು ಲಭ್ಯವಿವೆ. ಎಕ್ಸ್‌ರೇ ಟೆಕ್ನೀಷಿಯನ್, ಫಿಸಿಯೋಥೆರಪಿ, ಆಕ್ಯುಪೇಷನಲ್ ಥೆರಪಿ, ನರ್ಸಿಂಗ್, ಕ್ಲಿನಿಕಲ್ ಟೆಕ್ನಾಲಜಿ ಮುಂತಾದ ಹಲವಾರು ಕೋರ್ಸ್‌ಗಳನ್ನು ಸರ್ಕಾರಿ ಹಾಗೂ ಖಾಸಗಿ ಮೆಡಿಕಲ್ ಕಾಲೇಜುಗಳು ಪ್ರಾರಂಭಿಸಿವೆ. ಪಿ.ಯು. ನಂತರ ಇಂಥ ವಿಷಯಗಳಲ್ಲಿ ಡಿಪ್ಲೊಮಾ ಅಧ್ಯಯನ ಮಾಡಿ ಉದ್ಯೋಗ ಗಳಿಸಬಹುದು.

### ವಾಣಿಜ್ಯ ವಿಭಾಗ

ಪದವಿಪೂರ್ವ ಹಂತದಲ್ಲಿ ವಾಣಿಜ್ಯ ವಿಷಯಗಳಲ್ಲಿ ಸಂಯೋಜನೆಯಲ್ಲಿ ಅಧ್ಯಯನ ಮಾಡಿರುವ ವಿದ್ಯಾರ್ಥಿಗಳು ಸಾಮಾನ್ಯವಾಗಿ ಬಿ.ಕಾಂ., ಇಲ್ಲವೇ ಬಿ.ಬಿ.ಎಮ್. ಪದವಿಗೆ ಸೇರಿಕೊಳ್ಳುತ್ತಾರೆ. ಬಹುತೇಕ ಬಿ.ಕಾಂ. ವಿದ್ಯಾರ್ಥಿಗಳು ಪದವಿ ಅಧ್ಯಯನದ ಜೊತೆಗೆ ಮುಂದೆ ಚಾರ್ಟರ್ಡ್ ಅಕೌಂಟೆಂಟ್ ಆಗಿ ಉದ್ಯೋಗ ಅಥವಾ ಸ್ವಯಂ ವೃತ್ತಿ ಹಿಡಿಯುವ ದೃಷ್ಟಿಯಿಂದ ಸಿ.ಎ. ಪರೀಕ್ಷೆ ತೆಗೆದುಕೊಳ್ಳಲು ಬಯಸುತ್ತಾರೆ. ಬಿ.ಕಾಂ. ಪದವಿಯ ಜೊತೆಗೇ ಈ ಅಧ್ಯಯನವನ್ನು ನಡೆಸಲು ಸಾಧ್ಯವಿದೆ.

ಬಿ.ಕಾಂ. ಪದವಿ ಬಳಿಕ ಉದ್ಯೋಗಕ್ಕೆ ನೇರ ನೇಮಕಾತಿಯ ಅವಕಾಶಗಳು ಹೆಚ್ಚಿವೆ. ಪದವಿ ಮುಗಿಯುತ್ತಿದ್ದಂತೆ ನೇರವಾಗಿ ಉದ್ಯೋಗಕ್ಕೆ ಸೇರಬಹುದು. ಇಲ್ಲವೇ ಎಂ.ಕಾಂ. ಸ್ನಾತಕೋತ್ತರ ಪದವಿ ಕೋರ್ಸ್‌ಗೆ ಸೇರಿಕೊಳ್ಳಬಹುದು.

ಬಿ.ಕಾಂ. ಪದವಿಯಲ್ಲಿಯೇ ಫೈನಾನ್ಸ್, ಮ್ಯಾನೇಜ್‌ಮೆಂಟ್, ಟ್ಯಾಕ್ಸೇಷನ್, ಬ್ಯಾಂಕಿಂಗ್, ಟೂರಿಸಂ ಮುಂತಾದ ಇಂದಿನ ಅವಶ್ಯಕತೆಯ ಕ್ಷೇತ್ರಗಳಲ್ಲಿ ವಿಶೇಷ ಜ್ಞಾನ ನೀಡುವ ಕೋರ್ಸ್‌ಗಳನ್ನು ಕೆಲವು ವಿದ್ಯಾಸಂಸ್ಥೆಗಳು ನಡೆಸುತ್ತಿವೆ. ಅಂಥ ಉಪಯುಕ್ತ ಕೋರ್ಸ್‌ಗಳಿಗೆ ಸೇರಿ ಉದ್ಯೋಗದ ಅವಕಾಶಗಳನ್ನು ಹೆಚ್ಚಿಸಿಕೊಳ್ಳಬಹುದು. ಬಿ.ಕಾಂ. ಅಥವಾ ಬಿ.ಬಿ.ಎಂ. ನಂತರ ಎಂ.ಬಿ.ಎ. ಪದವಿಗೆ ಅಧ್ಯಯನ ಮಾಡುವುದು ಸಹ ವಾಣಿಜ್ಯ ವಿದ್ಯಾರ್ಥಿಗಳಿಗೆ ಇರುವ ಇನ್ನೊಂದು ಆಯ್ಕೆ. ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗಿರುವಷ್ಟು ಬಗೆಯ ಆಯ್ಕೆಗಳು ವಾಣಿಜ್ಯ ವಿದ್ಯಾರ್ಥಿಗಳಿಗೆ ಇಲ್ಲವಾದರೂ ಉದ್ಯೋಗ ಹಾಗೂ ಸ್ವಾವಲಂಬನೆಯ ದೃಷ್ಟಿಯಿಂದ ವಾಣಿಜ್ಯ ವಿದ್ಯಾರ್ಥಿಗಳು ಹೆಚ್ಚು ಅನುಕೂಲಕರ ಪರಿಸ್ಥಿತಿಯಲ್ಲಿದ್ದಾರೆ.

### ಕಲಾ ವಿಭಾಗ

ಕಲಾ ವಿಭಾಗಕ್ಕೆ ಸಂಬಂಧಿಸಿದ ಸಂಯೋಜನೆಗಳನ್ನು ಆಯ್ಕೆ ಮಾಡಿಕೊಂಡಿರುವ ವಿದ್ಯಾರ್ಥಿಗಳಲ್ಲಿ ತಮಗೆ ಉದ್ಯೋಗಾವಕಾಶಗಳು ಕಡಿಮೆ ಎಂಬ ನಂಬಿಕೆಯಿದೆ. ಆದರೆ, ಇಲ್ಲಿಯೂ ಸಹ ಅಧ್ಯಯನ ಮುಂದುವರೆಸುವ ಅಥವಾ ವೃತ್ತಿ ಹಿಡಿಯುವ ಹಲವಾರು ಅವಕಾಶಗಳಿವೆ. ಬಿ.ಎ. ಪದವಿಯಲ್ಲಿ ಇಂದು ಹಲವು ಬಗೆಯ ಸಂಯೋಜನೆಗಳು ಲಭ್ಯವಿವೆ. ಸೈಕಾಲಜಿ, ಕ್ರಿಮಿನಾಲಜಿ, ಸೋಷಿಯಲ್ ವರ್ಕ್, ಮುಂತಾದ ಕ್ಷೇತ್ರಗಳ ಜೊತೆಗೆ ಇಂದು ಪತ್ರಿಕೋದ್ಯಮ ಕೂಡ ಒಂದು ಜನಪ್ರಿಯ ಆಯ್ಕೆಯ ಕ್ಷೇತ್ರವಾಗಿದೆ.

ಬೇರೆ ವಿಭಾಗಗಳಲ್ಲಿರುವಂತೆ, ಕಲಾ ವಿಭಾಗದ ವಿದ್ಯಾರ್ಥಿಗಳು ತಮ್ಮ ಆಸಕ್ತಿಯ ಒಂದು ವಿಷಯದಲ್ಲಿ ಸ್ನಾತಕೋತ್ತರ ಪದವಿಯ ಅಧ್ಯಯನ ಮುಂದುವರೆಸಬಹುದು. ನಂತರ ಅದೇ ಕ್ಷೇತ್ರದಲ್ಲಿ ಸಂಶೋಧನೆಯನ್ನೂ ಕೈಗೊಳ್ಳಬಹುದು. ಒಂದು ವಿಷಯವಂತೂ ಸ್ಪಷ್ಟ. ವಿಜ್ಞಾನ, ವಾಣಿಜ್ಯ ಅಥವಾ ಕಲಾ ವಿಭಾಗಗಳಲ್ಲಿ ಯಾವುದು ಉತ್ತಮ ಎಂಬ ಪ್ರಶ್ನೆಯೇ ಏಳುವುದಿಲ್ಲ. ನಮ್ಮ ಆಸಕ್ತಿ ಹಾಗೂ ಸಾಮರ್ಥ್ಯಗಳೇ ನಿಜವಾದ ಅಳತೆಗೋಲು. ಯಾವ ವಿಭಾಗ–ವಿಷಯವನ್ನು ಆಯ್ಕೆ ಮಾಡಿಕೊಂಡರೂ ಉತ್ತಮ ಸಾಧನೆ ತೋರುವ ವಿದ್ಯಾರ್ಥಿಗಳಿಗೆ ಅವಕಾಶಗಳಿದ್ದೇ ಇವೆ. ■